### ಅಂಕಗಳು ಅಂಕಗಳಷ್ಟೆ!

‘ಅಂಕಗಳು ಅಂಕಗಳಷ್ಟೆ!’ (ಸ್ವಯಂಪ್ರಭಾ, ಮಾ.24) ಲೇಖನ ಚೆನ್ನಾಗಿದೆ. ಕ್ಲುಪ್ತವಾಗಿ ಬರೆದಿರುವ ಲೇಖನ ಈಗಿನ ಕಾಲಕ್ಕೆ ಪ್ರಸ್ತುತವಾಗಿದೆ. ಇದರಲ್ಲಿ ಮುಖ್ಯ ಹೋಮ್‌ವರ್ಕ್ ವಿಷಯವನ್ನು ಬಿಡಲಾಗಿದೆ. ಏಕೆಂದರೆ ಮನೆಗೆ ಬಂದ ಕ್ಷಣದಿಂದ ತಾಯಿ ತಂದೆಯರು ಮಕ್ಕಳನ್ನ ಕಾಡ್ತಾ ಇರತಾರೆ. ಮಕ್ಕಳು ಆಟ ಅನ್ನೋದನ್ನ ಮರೆತೇಹೋಗಿದ್ದಾರೆ ಅನ್ನೋ ರೀತಿಯಲ್ಲಿ ಪೋಷಕರು ಓದು ಓದು ಅಂತ ಹಿಂದೇನೆ ಬಿದ್ದಿರ್ತಾರೆ.

—ಶಾಂತಕುಮಾರ್ ಎನ್.

ಮಕ್ಕಳಿಗೆ ಅಂಕಗಳಿಗಾಗಿ ಪರೀಕ್ಷೆಗೇ ಪೂರ್ತಿ ಮಹತ್ವ ಕೊಟ್ಟು ಚಿಕ್ಕ ಪುಟ್ಟ ಚಟುವಟಿಕೆಗಳಿಗೆ ಮಹತ್ವ ನೀಡದೇ ಬೆಳೆಸುತ್ತಿರುವುದು ಸರಿಯಲ್ಲ. ಬದುಕುವುದಕ್ಕೆ ಬೇಕಾದ ಸಣ್ಣ ಸಣ್ಣ ಕೌಶಲ್ಯವನ್ನು ಚಿಕ್ಕವರಿರುವಾಗಲೇ ತಿಳಿಸಿಕೊಡುವುದು ಲೇಸೆಂದು ಮಾರ್ಮಿಕವಾಗಿ ತಿಳಿಸಿದ್ದಾರೆ.

—ಜೆ.ಎಸ್.ಗಾಂಜೇಕರ, ಕುಮಟಾ

### ಪೋಷಕರು ಏನು ಮಾಡಬೇಕು?

‘ಪರೀಕ್ಷೆಯ ಸಮಯ ಪೋಷಕರು ಏನು ಮಾಡಬೇಕು?’ (ಎಂ.ಎಸ್. ಉಷಾ ಪ್ರಕಾಶ್, ಮಾ. 24) ಲೇಖನ ಉತ್ತಮವಾಗಿ ಮೂಡಿಬಂದಿದೆ. ಪರೀಕ್ಷೆ ಎಂದರೆ ಮನುಷ್ಯನ ಜೀವನದ ಭವಿಷ್ಯವನ್ನು ರೂಪಿಸುವ ನಿರ್ಣಾಯಕ ಘಟ್ಟ. ಅದಕ್ಕೆ ಎಲ್ಲ ರೀತಿಯ ಪ್ರಾಮುಖ್ಯ ಕೊಡುವುದು ಮಕ್ಕಳ ಹಾಗೂ ಹೆತ್ತವರ ಕರ್ತವ್ಯ.

—ಮಾಧವ ಉದ್ಯಾವರ, ಮೈಸೂರು

### ಆಲ್ ದಿ ಬೆಸ್ಟ್ ಜಡೇಜಾ



‘ಮುಳ್ಳಿನ ಮೇಲೆ ನಡೆದು ಅರಳಿದ ಆಲ್‌ರೌಂಡರ್’ (ವಿಶಾಖ ಎನ್., ಮಾ. 24) ಲೇಖನ ರವೀಂದ್ರ ಜಡೇಜಾ ಅವರ ಸಾಹಸಗಾಥೆಯನ್ನು ಓದುಗರ ಮುಂದೆ ತೆರೆದಿಟ್ಟಿದೆ. ಜಡೇಜಾ ಅವರು ಬೆಂಕಿಯಲ್ಲಿ ಅರಳಿದ ಹೂವು. ನೋವು ನಲಿವುಗಳ ಮೂಸೆಯಲ್ಲಿ ಮೂಡಿ ಬಂದ ಸಾಹಸಿ ಕ್ರಿಕೆಟ್ ಆಟಗಾರ. ತನ್ನ ಜೀವನದ ಎಲ್ಲ ರೀತಿಯ ಟೆಸ್ಟ್‌ಗಳನ್ನು ಎದುರಿಸಿ ಟೆಸ್ಟ್ ಕ್ರಿಕೆಟ್‌ನಲ್ಲಿ ಅವರೀಗ ನಂಬರ್ ಒನ್ ಆಲ್ ರೌಂಡರ್ ಆಗಿರುವುದು ಕ್ರಿಕೆಟ್ ಅಭಿಮಾನಿಗಳು ಸಂತಸ ಸಂಭ್ರಮ ಪಡುವ ಸಂಗತಿ.
ಆಲ್ ದಿ ಬೆಸ್ಟ್ ಜಡೇಜಾ.

—ಕೆ.ವಿ. ಸೀತಾರಾಮ್, ಮಂಗಳೂರು



### ಡಯಾಬಿಟಿಸ್ ರಿವರ್ಸಲ್

‘ಡಯಾಬಿಟಿಸ್ ರಿವರ್ಸಲ್’ (ಡಾ. ವಾಸು ಎಚ್. ವಿ., ಮಾ. 31) ಲೇಖನ ಅದ್ಭುತವಾಗಿತ್ತು. ಕಳೆದ ಹದಿನೈದು ವರ್ಷಗಳಿಂದ ನನಗೆ ಡಯಾಬಿಟಿಸ್ ಇದೆ. ಈ ಲೇಖನ ಆ ಕಾಯಿಲೆಯ ಬಗ್ಗೆ ಹಲವು ಹೊಸ ವಿಷಯಗಳನ್ನು ತಿಳಿಸಿಕೊಟ್ಟಿತು. ಡಯಾಬಿಟಿಸ್ ಅನ್ನುವುದು ಸರ್ವೆ ಸಾಮಾನ್ಯವಾಗಿರುವ, ವೈದ್ಯಕೀಯ ಜಗತ್ತಿನಲ್ಲಿ ಅದೊಂದು ಮಾಫಿಯಾ ರೀತಿ ಹರಡಿಕೊಂಡಿರುವ ಸಂದರ್ಭದಲ್ಲಿ ನಿಮ್ಮ ಕಾಳಜಿ ಮತ್ತು ಪ್ರಯತ್ನ ಶ್ಲಾಘನೀಯ. ಈ ಮಾದರಿಯಲ್ಲಿ ಆಹಾರ ಸೇವನೆ ಹೇಗಿರಬೇಕು ಎಂಬ ಕುರಿತೂ ಮಾಹಿತಿ ನೀಡಿದ್ದರೆ ಲೇಖನ ಇನ್ನಷ್ಟು ಉಪಯುಕ್ತವಾಗಿರುತ್ತಿತ್ತು.

—ಗುರುಮೂರ್ತಿ ಹೊಂಬಯ್ಯ

### ಮರಳಿ ಬರುವರೆ ರಮ್ಯಾ?

‘ಮರಳಿ ಬರುವರೆ ರಮ್ಯಾ?’ (ಪದ್ಮನಾಭ ಭಟ್, ಮಾ. 24) ಲೇಖನ ಚೆನ್ನಾಗಿದೆ. ರಾಜಕೀಯ ಸಿನಿಮಾ ಎರಡೂ ರಂಗಗಳಲ್ಲೂ ಮನೆಮಾತಾಗಿರುವ ನಟಿ ರಮ್ಯಾ ಹಲವು ಕಾಲದಿಂದ ‘ಮರೆ’ಯಲ್ಲಿದ್ದರೂ ಕನ್ನಡ ಚಿತ್ರರಂಗ ಹಾಗೂ ಅಭಿಮಾನಿಗಳನ್ನು ಮರೆತಿಲ್ಲ ಎನ್ನುವ ಸೂಚನೆಯೂ ಸಿಕ್ಕಿದೆ. ರಮ್ಯ (ಕಾಲ) ಮರಳಿ ಬರುತ್ತಿರುವುದು ಕನ್ನಡ ಚಿತ್ರರಂಗ ಹಾಗೂ ಅಭಿಮಾನಿ ವೃಂದದಲ್ಲಿ ‘ನವ ವಸಂತ’ದ ಗಾಳಿ ಬೀಸಲಾರಂಭಿಸಿದೆ!

—ಎಚ್. ಸಿದ್ದಾರ್ಥ ಕಾರ್ಕಳ

### ಅನುಶ್ರೀ ವಾಪಸಾತಿ

‘ಸಿಕ್ಕ ಅವಕಾಶವನ್ನು ಶ್ರದ್ಧೆಯಿಂದ ನಿರ್ವಹಿಸುವೆ’ (ಪದ್ಮನಾಭ ಭಟ್, ಮಾ.24) ಬರಹ ಚೆನ್ನಾಗಿತ್ತು. ಕಿರುತೆರೆ ನಿರೂಪಕಿ ಅನುಶ್ರೀ ಪುನಃ ಹಿರಿತೆರೆಗೆ ಬರುತ್ತಿರುವುದು ಸಂತೋಷದ ವಿಷಯ. ಸಿನಿಮಾಗಿಂತ ನಿರೂಪಕಿಯಾಗಿ ಎಲ್ಲರ ಮನೆಮಾತಾಗಿರುವ, ಮನಗೆದ್ದ ಹುಡುಗಿ ಅನುಶ್ರೀ. ಕಿರುತೆರೆಯಲ್ಲೇ ಇವರನ್ನು ನೋಡಲು ಬಯಸುತ್ತೇವೆ.

—ಟಿ. ಎಸ್. ಪ್ರತಿಭಾ, ಚಿತ್ರದುರ್ಗ

### ಕಣ್ಣೋಟ ಹಿನ್ನೋಟ

‘ಕಣ್ಣೋಟ ಹಿನ್ನೋಟ’ (ಮಂಜುನಾಥ್ ಕಿರಣ್, ಮಾ. 24) ಮುಖಪುಟ ಲೇಖನ ಚೆನ್ನಾಗಿತ್ತು. ಯುದ್ಧದ ಅನುಭವ ಕಥನ ಮಥನ ಓದುತ್ತಾ ನನ್ನ ಸ್ನೇಹಿತೆ ಡಾ. ಸುಧಾ ಅವರ ಮಗ ಡಾ. ವೈಭವ್ ಉಕ್ರೇನ್‌ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ. ಯುದ್ಧದ ಸಮಯದಲ್ಲಿ ಸುರಕ್ಷಿತವಾಗಿ ಮನೆಯನ್ನು ತಲುಪಿದ್ದಾನೆ. ಆ ಸಮಯದಲ್ಲಿ ಸ್ನೇಹಿತೆಯರ ಪ್ರಾರ್ಥನೆ ಕಣ್ಣು ಮುಂದೆ ತೇಲಿ ಬಂದಿತು.

—ಶೀಲಾ, ಬೆಂಗಳೂರು

### ಉತ್ತಮ ಧಾರಾವಾಹಿ

ಕುವೆಂಪು ವಿರಚಿತ ಜಿ. ಕೃಷ್ಣಪ್ಪನವರ ಗಹನ (ಸರಳವಲ್ಲ) ಕನ್ನಡ ರೂಪದ ‘ಚಿತ್ರಾಂಗದಾ’ಳನ್ನು ಧಾರಾವಾಹಿಯಾಗಿ ನೀಡುತ್ತಿರುವುದಕ್ಕೆ ಸಂಪಾದಕರಿಗೆ ಪ್ರಣಾಮಗಳು. ‘ಉದಯನದಿ’, ‘ಕುಸುಮ ಪರಿಷತ್ತು’, ‘ಗಗನ ದರ್ಪಣ’ ಇತ್ಯಾದಿ ಪದಗಳು ಕಚಗುಳಿಯಿಡುತ್ತವೆ.

—ಎಸ್. ಹೆಚ್. ಹೂಗಾರ್, ಹರಿಹರ

### ಪ್ರಸವಕ್ಕೆ ಮುನ್ನ

‘ಪ್ರಸವಕ್ಕೆ ಮುನ್ನ’ (ಪ್ರಭಾಕರ ಶಿಶಿಲ, ಮಾ. 24) ಕಥೆ ಎಲ್ಲರ ಮನಸಿನ ತುಮುಲವೂ ಆಗಿದೆ. ಮೇಷ್ಟ್ರು ಮತ್ತು ಅವರ ಮಡದಿಯ ಜಿಜ್ಞಾಸೆ ಚೆನ್ನಾಗಿ ಮೂಡಿಬಂದಿದೆ. ಆದರೆ ಗರ್ಭಿಣಿ ತಪಾಸಣೆಗೆ ಹೋದಾಗಲೇ ಒಂದು ಅಥವಾ ಎರಡು ಮಕ್ಕಳು ಅಂತ ಗೊತ್ತಾಗುವುದು. ಇದು ಲೇಖಕರಿಗೆ ಹೊಳೆಯಲಿಲ್ಲವೇ?

—ಭಾರತಿ ಗಂಗಾಧರ್, ಬೆಂಗಳೂರು

### ಹಾಡೇ ಹಾದಿಯ ತೋರಿತು

‘ಹಾಡೇ ಹಾದಿಯ ತೋರಿತು’ (ಯೋಗೇಶ್ ಎಂ.ಎನ್., ಮಾ. 31) ಲೇಖನ ಚೆನ್ನಾಗಿದೆ. ಜಾನಪದ ಕಲಾವಿದರೋರ್ವರು ಸರ್ಕಾರದ ನೆರವಿಲ್ಲದೆ ತಮ್ಮ ಕಲೆಗೆ ಆರ್ಥಿಕ ಭದ್ರತೆ ತಂದುಕೊಂಡದ್ದು ಇತರರಿಗೆ ಮಾದರಿ. ಇದನ್ನು ಇತರ ಕಲಾವಿದರೂ ಅನುಸರಿಸಬಹುದಲ್ಲವೇ?

—ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ಹೊಸ ದೃಷ್ಟಿಕೋನ ಕೊಟ್ಟ ಲೇಖನ

ಕಳೆದ ಮೂರು ವಾರಗಳಿಂದ ‘ಸುಧಾ’ದಲ್ಲಿ ವಿಜಯ್ ಜೋಷಿ ಅವರು ಷೇರು ಮಾರುಕಟ್ಟೆ ಕುರಿತು ಬರೆಯುತ್ತಿರುವ ಲೇಖನ ಸರಣಿ ಹೊಸ ಆಲೋಚನೆಗೆ ದಾರಿ ಮಾಡಿಕೊಟ್ಟಿತು. ಕಡಿಮೆ ಮೊತ್ತದ ಹಣ ಹೂಡಿಕೆ ಮಾಡಿಸುವ ಕೆಲವು ಫಂಡ್‌ಗಳ ವಿವರವೂ ಇದ್ದರೆ ಚೆನ್ನಾಗಿತ್ತು.

—ಡಾ. ಸುನಿಲ್ ಕುಮಾರ್, ಚಿಂತಾಮಣಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in